ದಿಃ **13.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಂ.ಬಿ.ಎನ್ ವಕೀಲರಿಂದಃ ಆರೋಪಿ ಪರವಾಗಿಃ

**12)** ಶ್ರೀಮತಿ ಲೀಸಾ ನೆಲವಡಿ ಯಾರು ಅಂತಾ ನನಗೆ ಗೊತ್ತಿರುವದಿಲ್ಲ. ಶ್ರೀಮತಿ ಲೀಸಾ ನೆಲವಡಿ ಇವರು ಹಾವೇರಿಯ ಬಸವೇಶ್ವರ ನಗರದಲ್ಲಿ ವಾಸವಾಗಿರುತ್ತಾರೆ ಅಂದರೆ ನನಗೆ ಗೊತ್ತಿರುವದಿಲ್ಲ. ನನ್ನ ಖುದ್ದ ಊರು ಆಡೂರ ಗ್ರಾಮ ಆಗಿರುತ್ತದೆ. ನಾನು 4 ನೇಯತ್ತೆವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು 4 ನೇಯತ್ತೆಯವರೆಗೆ ಉರ್ದು ಭಾಷೆಯಲ್ಲಿ ವಿಧ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷಯನ್ನು ಓದಲು ಮತ್ತು ಬರೆಯಲು ಬರುವದಿಲ್ಲ ಅಂದರೆ ಸರಿ. ನನ್ನ ಮದುವೆಯು 2010 ರಲ್ಲಿ ಆಗಿರುತ್ತದೆ, ನನ್ನ ಮದುವೆಯಾಗಿ 15 ವರ್ಷ ವಯಸ್ಸುಗಳು ಆಗಿರುತ್ತವೆ. ಮೊದಲು ನನ್ನ ಗಂಡ ಐ.ಡಿ.ಎಫ್.ಸಿ ಬ್ಯಾಂಕ, ಹಾವೇರಿ ಶಾಖೆಯಲ್ಲಿ ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿರುವದಿಲ್ಲ. ನನ್ನ ಗಂಡನಿಗೆ ಐ.ಡಿ.ಎಫ್.ಸಿ ಬ್ಯಾಂಕ ಹಾವೇರಿಯಲ್ಲಿ ಕೆಲಸ ಮಾಡುತ್ತಿದ್ದರ ಬಗ್ಗೆ ತಿಂಗಳಿಗೆ ಇಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿರುವದಿಲ್ಲ.

**13)** ನಮ್ಮ ಮನೆತನಕ್ಕೆ ಸೇರಿದ ಆಡೂರ ಗ್ರಾಮದಲ್ಲಿ ಮೂರು ಮನೆಗಳು ಇರುತ್ತವೆ. ಅವುಗಳಲ್ಲಿ ಒಂದು ಮನೆಯನ್ನು ಲೀಸ್‌ಗೆ ಕೊಟ್ಟಿರುತ್ತೇನೆ, ಅದೇ ರೀತಿ ಇನ್ನೊಂದು ಮನೆಯನ್ನು ವೈದ್ಯರಿಗೆ ಬಾಡಿಗೆ ರೀತಿಯಿಂದ ಕೊಟ್ಟಿರುತ್ತೇನೆ. ಇನ್ನೊಂದುಮನೆಯನ್ನು ನಮ್ಮ ಕುಟುಂಬದಲ್ಲಿ ನಾವೇ ಅಗರಬತ್ತಿ ತಯಾರಿಸಲು ಇಟ್ಟುಕೊಂಡಿರುತ್ತೇವೆ. ಸದರಿ ಮನೆಯಲ್ಲಿ ಮೊದಲು ನಾವು ವಾಸ ಮಾಡುತ್ತಿದ್ದೇವು, ಈಗ ಹಾವೇರಿಯ ಮಂಜುನಾಥನಗರದಲ್ಲಿ ವಾಸ ಇದ್ದೇವೆ. ಒಂದು ಮನೆಯನ್ನು ಲೀಸಗೆ ಹಾಕಿರುವ ಮನೆಯಿಂದ ರೂ.2,00,000/- ಉತ್ಪನ್ನ ಬಂದಿದ್ದು ಅದೇ ರೀತಿ ಇನ್ನೊಂದು ಮನೆಯನ್ನು ವೈದ್ಯರಿಗೆ ಬಾಡಿಗೆ ರೀತಿಯಿಂದ ಕೊಟ್ಟಿದ್ದು ನನಗೆ ತಿಂಗಳಿಗೆ ರೂ.3,000/- ಬಾಡಿಗೆ ಬರುತ್ತದೆ. ಇನ್ನೊಂದು ಮನೆಯಲ್ಲಿ ನಾವೇ ಅಗರಬತ್ತಿ

ತಯಾರು ಮಾಡುತ್ತೇವೆ. ಆಡೂರ ಗ್ರಾಮದಲ್ಲಿರುವ ಮೂರು ಮನೆಗಳು ನನ್ನ ಗಂಡನ ಹೆಸರಿನಲ್ಲಿ ಇರುತ್ತವೆ. ಸದರಿ ಮನೆಗಳು ಆಡೂರ ಗ್ರಾಮದಲ್ಲಿ ನನ್ನ ಗಂಡನ ಹೆಸರಿನಲ್ಲಿ ಇರುತ್ತವೆ ಎಂದು ತೋರಿಸಲು ಮೂರು ಮನೆಗಳ ಈ-ಖಾತಾ ಉತಾರಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ.

**14)** ಆಡೂರ ಗ್ರಾಮದಲ್ಲಿ ಇರುವ ಮೂರು ಮನೆಗಳು ನನ್ನ ಗಂಡನ ಹೆಸರಿನಲ್ಲಿ ಇರುತ್ತವೆ ಎನ್ನುವ ಕುರಿತಾಗಿ ನಾನು ಯಾವುದೇ ದಾಖಲೆಯನ್ನು ನೋಡಿರುವದಿಲ್ಲ. ನಾನು ಹಾವೇರಿಯಲ್ಲಿ ಬ್ಯೂಟಿ ಪಾರ್ಲರ ತೆಗೆದು ಅಲ್ಲಿ ನನ್ನ ಉತ್ಪನ್ನವನ್ನು ತೆಗೆಯುತ್ತೇನೆ. ನಾನು ಸದರಿ ಬ್ಯೂಟಿಪಾರ್ಲರನ್ನು ಹಾವೇರಿಯಲ್ಲಿ 10 ವರ್ಷದ ಹಿಂದೆ ತೆಗೆದಿದ್ದೇನೆ. ನಾನು ಹಾವೇರಿಯಲ್ಲಿ ನಡಸೊತ್ತಿರುವ ಬ್ಯೂಟಿಪಾರ್ಲರನ್ನು ಫಾಮಿ ಬ್ಯೂಟಿ ಪಾರ್ಲರ ಎನ್ನುವ ಹೆಸರಿನಲ್ಲಿ ನಡೆಯಿಸಿಕೊಂಡು ಹೊರಟಿರುತ್ತೇನೆ. ಸದರಿ ಬ್ಯೂಟಿ ಪಾರ್ಲರನ್ನು ನಡೆಸುಕೊಂಡು ಹೋಗಲು ನಾನು ಸಂಬಂದಪಟ್ಟ ಇಲಾಖೆಯಿಂದ ಜಿ.ಎಸ್.ಟಿ ಮತ್ತು ಸಿ.ಎಸ್.ಟಿ ನಂಬರ ಆಗಲಿ ತೆಗೆದುಕೊಂಡಿರುವದಿಲ್ಲ. ನಾನು ಬ್ಯೂಟಿಪಾರ್ಲರನ್ನು ನಡೆಸಲು ಸದರಿ ಬ್ಯೂಟಿಷಿಯನ್ ಕೋರ್ಸಗೆ ಯಾವುದೇ ಪ್ರಮಾಣ ಪತ್ರ ಪಡೆದಿರುವದಿಲ್ಲ, ಆದರೆ ನಾನು ಮೊದಲು ಇನ್ನೊಂ ದು ಬ್ಯೂಟಿ ಪಾರ್ಲರನಲ್ಲಿ ಕೆಲಸ ಮಾಡಿ ಈಗ ಸ್ವಂತ ಬ್ಯೂಟಿ ಪಾರ್ಲರನಲ್ಲಿ ತೆಗೆದಿದ್ದೇನೆ. ನಾನು ಮಹಿಮಾ ಬ್ಯೂಟಿ ಪಾರ್ಲರ ಹಾವೇರಿಯಲ್ಲಿ ಬ್ಯೂಟಿಷಿಯನ ಕೆಲಸ ಮಾಡಿ ಅಲ್ಲಿ ಪ್ರಮಾಣ ಪತ್ರ ಪಡೆದಿದ್ದೇನೆ. ನನ್ನ ಬ್ಯೂಟಿ ಪಾರ್ಲರಗೆ ಸಂಬಂದಪಟ್ಟಂತೆ ನಾನು ಹಾವೇರಿಯಲ್ಲಿರುವ ಕೆ.ವಿ.ಜಿ ಬ್ಯಾಂಕ ಮುಖಾಂತರ ಸಂಬಂದಪಟ್ಟ ವ್ಯವಹಾರ ಮಾಡುತ್ತೇನೆ.

**15)** ಬ್ಯೂಟಿಷಿಯನ್ ಕೋರ್ಸ ಮುಗಿಸಿ ನಾನು 10 ವರ್ಷದಿಂದ ನಡೆಯಿಸಿಕೊಂಡು ಬರುವ ಉದ್ಯೋಗವು ವಾಣಿಜ್ಯ ಉದ್ಯೋಗವಾಗಿದ್ದರಿಂದ ಆದ್ದರಿಂದ ನಾನು ಹಾವೇರಿಯ ಕೆ.ವಿ.ಜಿ ಬ್ಯಾಂಕನಲ್ಲಿ ಜಿರೋ ಬ್ಯಾಲೆನ್ಸ ಅಕೌಂಟ ತೆಗೆದಿದ್ದೇನೆ. ನಾನು ಬ್ಯೂಟಿಪಾರ್ಲರನಲ್ಲಿ ರೂ.1,00,000/- ಆದಾಯ ಇರುತ್ತದೆ, ಆದರೆ ಅದು ಸೀಸನ್ ವೈಜ್ ಇರುತ್ತದೆ. ಮದುವೆ ಸಂದರ್ಭಗಳಲ್ಲಿ ಹೊರತುಪಡಿಸಿ ಸಾಮಾನ್ಯವಾಗಿ ನನ್ನ

ಬ್ಯೂಟಿ ಪಾರ್ಲರನಿಂದ ನನಗೆ ತಿಂಗಳಿಗೆ ರೂ.30,000/- ಆದಾಯ ಬರುತ್ತದೆ. ನಮ್ಮ ಬ್ಯೂಟಿ ಪಾರ್ಲರಗೆ ಬರುವ ಗ್ರಾಹಕರಿಗೆ ನಮ್ಮ ಬ್ಯೂಟಿ ಪಾರ್ಲರನಲ್ಲಿ ಕೆಲಸ ಮಾಡಿಸಿಕೊಂಡು ಹೋದ ಬಳಿಕ ಅವರಿಗೆ ಯಾವುದೇ ಬಿಲ್ಲನ್ನು ಕೊಡುವದಿಲ್ಲ ಮತ್ತು ಯಾವುದೇ ಬ್ಯೂಟಿ ಪಾರ್ಲರನವರು ಬಿಲ್ಲನ್ನು ಕೊಡುವದಿಲ್ಲ ಎಂದು ಉತ್ತರಿಸಿದ್ದಾರೆ. ನಾನು ಬ್ಯೂಟಿ ಪಾರ್ಲರ ತೆಗೆದಿರುವದು ವಾಣಿಜ್ಯ ವ್ಯಾಪಾರವಾಗಿದ್ದರಿಂದ ಸದರಿ ಬ್ಯೂಟಿ ಪಾರ್ಲರ ನಡೆಸಲು ಸಂಬಂದಪಟ್ಟ ಇಲಾಖೆಯಿಂದ ಜಿ.ಎಸ್.ಟಿ ಮತ್ತು ಸಿ.ಎಸ್.ಟಿ ನಂಬರ ತೆಗೆದುಕೊಳ್ಳುವದು ಕಡ್ಡಾಯವಾಗಿರುತ್ತದೆ ಅಂದರೆ ಸರಿ. ನನ್ನ ಬ್ಯೂಟಿ ಪಾರ್ಲರನಲ್ಲಿ ಬರುವಂತಹ ಆದಾಯದ ಕುರಿತಾಗಿ ನಾನು ವಾರ್ಷಕವಾಗಿ ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಾನು 10 ವರ್ಷದಿಂದ ಆದಾಯತೆರಿಗೆ ಕಟ್ಟಿದ್ದರ ಕುರಿತಾಗಿ ಯಾವುದೇ ತೆರಿಗೆ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಅದೇ ರೀತಿ ಮದುವೆ ಸಂದರ್ಭಗಳಲ್ಲಿ ನನಗೆ ಬ್ಯೂಟಿಪಾರ್ಲರನಿಂದ ರೂ.1,00,000/- ಆದಾಯ ಬರುವ ಕುರಿತಾಗಿ ಸಾಮಾನ್ಯ ದಿನಗಳಲ್ಲಿ ಬ್ಯೂಟಿಪಾರ್ಲರನಿಂದ ರೂ.30,000/- ಆದಾಯ ಬರುವದಾಗಿ ನನ್ನ ಬಳಿ ಯಾವುದೇ ಅಕೌಂಟ ಸ್ಟೇಟಮೇಂಟ್ ಇಲ್ಲ, ಸದರಿ ಅಕೌಂಟ ಕುರಿತಾಗಿ ಜಿ.ಎಸ್.ಟಿ ಮತ್ತು ಸಿ.ಎಸ್ .ಟಿ ನಂಬರ ತೆಗೆದುಕೊಳಳದೇ ಇರುವದರಿಂದ ಆ ಹಣವನ್ನು ನಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುತ್ತೇನೆ.

ನಾನು 10 ವರ್ಷದಿಂದ ಬ್ಯೂಟಿಪಾರ್ಲರನಿಂದ ಬರುವ ಆದಾಯದ ಕುರಿತಾಗಿ ಇಲ್ಲಿಯವರೆಗೆ ಎಷ್ಟು ರಶೀದಿಗಳನ್ನು ಕಟ್ಟಿದ್ದರ ಕುರಿತಾಗಿ ಅಂತಹ ರಶೀದಿಗಳು ಇರುವದಿಲ್ಲ.

**16)** ಈಗ ಕರ್ನಾಟಕ ಸರ್ಕಾರದವರು ಜಾರಿಗೆ ತಂದಿರುವ ಬಿ.ಪಿ.ಎಲ್ ಕಾರ್ಡನ್ನು ನಾನು ನೋಡಿದ್ದೇನೆ. ಅದೇ ರೀತಿ ಸರ್ಕಾರದವರು ಹಾಕಿಕೊಂಡ ಯೋಜನೆಯ ಪ್ರಕಾರ ತಿಂಗಳಿಗೆ ರೂ.2,000/- ಹಣವನ್ನು ಪಡೆಯುತ್ತೇನೆ ಅಂದರೆ ಸರಿ. ಅದೇ ರೀತಿ ಕೇಂದ್ರ ಸರ್ಕಾರದವರು ಜಾರಿ ಮಾಡಿದ ಪ್ರಧಾನ ಮಂತ್ರಿ ಗೃಹ ನಿರ್ಮಾಣದ ಹಣಕಾಸಿನ

ಯೊೀಜನೆಯಡಿಯಲ್ಲಿ ನಾನು ಹಣವನ್ನು ಪಡೆದು ಹಾವೇರಿಯಲ್ಲಿ ಮನೆಯನ್ನು ಸಹ ಕಟ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

**17)** ಆರೋಪಿ ರೇಖಾ  ಕೊಟಕ್ ನನಗೆ 8 ವರ್ಷದಿಂದ ಪರಿಚಯ ಇರುತ್ತಾಳೆ. ಆರೋಪಿ ರೇಖಾ ಕೊಟಕ್ ಇವರ ಖುದ್ದು ಊರು ಹಾವೇರಿ ಪಟ್ಟಣ ಆಗಿರುತ್ತದೆ. ಆರೋಪಿಯು ಪ್ರಸ್ತುತವಾಗಿ ಹಾವೇರಿಯಲ್ಲಿ ಸೀರೆ ವ್ಯಾಪಾರ ಮಾಡಿಕೊಂಡು ಬರುತ್ತಿದ್ದರು. ಆರೋಪಿಯು ಸೀರೆ ವ್ಯಾಪಾರವನ್ನು ಮಾಡುತ್ತಾರೆ ಎನ್ನುವ ಕುರಿತಾಗಿ ನಾನು ಅವರ ಅಂಗಡಿಯ ಕುರಿತಾಗಿ ಯಾವುದೇ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ ಮತ್ತು ಅವರು ಸೀರೆ ವ್ಯಾಪಾರ ಮಾಡುವಾಗ ತೆಗೆದಂತಹ ಪೋಟೋಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವದಿಲ್ಲ. ಆರೋಪಿ ರೇಖಾ ಕೊಟಕ್ ಹಾವೇರಿಯಲ್ಲಿ ಸೀರೆ ವ್ಯಾಪಾರ ಮಾಡುತ್ತಿದ್ದರ ಕುರಿತಾಗಿ ನಾನು ನನ್ನ ಪಿರ್ಯಾದಿಯಲ್ಲಿ ಬರೆಯಿಸಿರುವದಿಲ್ಲ, ಏಕೆಂದರೆ ಆ ವಿಷಯ ನನಗೆ ಸಂಬಂದಪಟ್ಟಿದ್ದು ಆಗಿರುವದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

**18)** ಆರೋಪಿ ರೇಖಾ ಕೊಟಕ ಇವರು ನನ್ನ ಬ್ಯೂಟಿ ಪಾರ್ಲರಗೆ ಬರುತ್ತಿದ್ದರಿಂದ, ಅದರಿಂದ ಆರೋಪಿ ರೇಖಾ ಕೊಟಕ ಇವರು ಸೀರೆ ವ್ಯಾಪಾರ ಮಾಡುತ್ತಾರೆ ಎನ್ನುವ ವಿಷಯ ತಿಳಿದುಕೊಂಡಿರುತ್ತೇನೆ. ಆರೋಪಿ ಮೊದಲನೇ ಬಾರಿಗೆ ಆಕೆಯ ಮನೆಯಲ್ಲಿ ಹಣಕಾಸಿನ ಅಡಚಣೆ ಇದೆ ಎಂದು ನನ್ನ ಬಳಿ ಹಣಕಾಸಿನ ಸಹಾಯಕ್ಕಾಗಿ ಮೊದಲನೇ ಬಾರಿಗೆ 2020 ನೇ ಇಸ್ವಿಯಲ್ಲಿ ಕೇಳಿರುತ್ತಾಳೆ. 2020 ನೇ ಇಸ್ವಿಯಲ್ಲಿ ಆರೋಪಿ ರೇಖಾ ಕೊಟಕ್ ಇವರು ಹಣಕಾಸಿನ ಪರಿಸ್ಥಿತಿ ಸರಿ ಇರುವದಿಲ್ಲ, ಆದ ಕಾರಣ ಆಕೆಗೆ ಹಣಕಾಸಿನ ಅವಶ್ಯಕತೆ  ಇರುವದರಿಂದ ನಾನು ಆಕೆಯ ಅವಶ್ಯಕತೆಯನ್ನು ನೋಡಿ ನಾನು ಹಣ ಕೊಟ್ಟಿರುತ್ತೇನೆ. ಆರೋಪಿಯು ನನ್ನ ಬಳಿ ಆಕೆಗೆ ಹಣಕಾಸಿನ ಅಡಚಣೆ ಇದ್ದಾಗ ಆಗಾಗ ನನ್ನ ಬಳಿ ರೂ.10,000/- ಗಳನ್ನು ಕೈಗಡ ಸಾಲವಾಗಿ ಪಡೆದು ನಂತರ ಮರಳಿ ಕೊಡುತ್ತಾ ಬರುತ್ತಿದ್ದರು. ನಾನು ಬೇರೆಯವರಿಗೆ

ಹಣವನ್ನು ಸಾಲದ ರೂಪದಲ್ಲಿ ಕೊಡುವದು ಮತ್ತು ತೆಗೆದುಕೊಳ್ಳುವದು ನಾನು ಬಡ್ಡಿ ವ್ಯಾಪಾರ ಮಾಡುತ್ತೇನೆ ಅಂದರೆ ಸರಿಯಲ್ಲ.

**19)** ಆರೋಪಿ ರೇಖಾ ಕೊಟಕ್ ಇವರು ಎರಡರಿಂದ ಮೂರು ಸಾರಿ ನನ್ನ ಬಳಿ ರೂ.10,000/- ಅಂತೆ ಹಣವನ್ನು ನನ್ನ ಬಳಿ ಪಡೆದಿದ್ದಾಳೆ, ಆಕೆ ಯಾವ ದಿನಾಂಕ ಮತ್ತು ವರ್ಷದಂದು ನನ್ನ ಬಳಿ ಮೂರು ಸಾರಿ ರೂ.10,000/- ರಂತೆ ತೆಗೆದುಕೊಂಡು ಹೋಗಿದ್ದಾಳೆ ಎಂದು ದಿನಾಂಕ ಮತ್ತು ಇಸ್ವಿ ನೆನಪಿಲ್ಲ. ನನ್ನ ಬಳಿ ಆರೋಪಿಯು ರೂ.10,000/- ರಂತೆ ಮೂರು ಸಾರಿ ಹಣವನ್ನು ತೆಗೆದುಕೊಂಡ ಹೋದ ನಂತರ ಎರಡು ತಿಂಗಳ ಒಳಗಾಗಿ ಆ ಹಣವನ್ನು ಮರುಪಾವತಿ ಮಾಡುತ್ತಾ ಬರುತ್ತಿದ್ದಳು. ಆರೋಪಿಯು ನನ್ನ ಬಳಿ ರೂ.10,000/- ಗಳನ್ನು ಕೈಗಡ ಸಾಲದ ರೂಪವಾಗಿ ತೆಗೆದುಕೊಳ್ಳುವಾಗ ಯಾವುದೇ ದಾಖಲೆಗಳನ್ನು ಭದ್ರತೆಗಾಗಿ ಬರೆದುಕೊಡುತ್ತಿರುವದಿಲ್ಲ. 2020 ಡಿಸೆಂಬರಂದು ಅರೋಪಿಯು ನನಗೆ ಈ ಪ್ರಕರಣದಲ್ಲಿ ಹೇಳಿದಂತಹ ಹಣಕಾಸಿನ ವ್ಯವಹಾರದ ಕುರಿತಂತೆ ಹಣವನ್ನು ಕೇಳಿರುತ್ತಾರೆ. 2020 ಡಿಸೆಂಬರಂದು ಆರೋಪಿಯು ನನ್ನ ಬಳಿ ರೂ.6,00,000/- ಹಣವನ್ನು ಕೇಳಿರುತ್ತಾಳೆ. ಆರೋಪಿಯು ರೂ.6,00,000/- ಕೇವಲ 6 ತಿಂಗಳ ಅವಧಿಗೆ ಮಾತ್ರ ತೆಗೆದುಕೊಂಡಿರುತ್ತಾಳೆ.

**20)** ಆರೋಪಿಯು ತನ್ನ ಸೀರೆ ವ್ಯಾಪಾರವನ್ನು ಹೆಚ್ಚಿನ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಮತ್ತು ಅಭಿವೃದ್ಧಿಪಡಿಸಲು ಆಕೆಗೆ ಹಣಕಾಸಿನ ಅವಶ್ಯಕತೆ ಇದೆ ಎಂದು ಕೇಳಿದಾಗ ನಾನು ಆಕೆಯ ಮೇಲೆ ಭರವಸೆ ಇಟ್ಟು ರೂ.6,00,000/- ಹಣವನ್ನು ಕೊಟ್ಟಿರುತೆದ್ದೀನೆ. ಆರೋಪಿಗೆ ನಾನು ರೂ.6,00,000/- ಕೊಟ್ಟ ಬಳಿಕ ನಾನು ಭದ್ರತೆಗಾಗಿ ಯಾವುದೇ ದಾಖಲೆ ತೆಗೆದುಕೊಂಡಿಲ್ಲ. ಆರೋಪಿಗೆ ರೂ.6,00,000/- ಹಣವನ್ನು ಸಾಲದ ರೂಪವಾಗಿ ಕೊಡುವಾಗ ಯಾವುದೇ ಸಾಕ್ಷಿದಾರರನ್ನು ಹಾಜರಿಟ್ಟುಕೊಂಡು ಕೊಟ್ಟಿರುವದಿಲ್ಲ.

**21)** ರೂ.6,00,000/- ಗಳಲ್ಲಿ ನಾನು ರೂ.3,00,000/- ಗಳನ್ನು ನನ್ನ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ತೆಗೆದುಕೊಂಡಿದ್ದೇನೆ. ನಾನು ಇನ್ನೂ 3,00,000/- ಗಳನ್ನು ಕೆ.ವಿ.ಜಿ ಬ್ಯಾಂಕನಲ್ಲಿ ಸಾಲ ಮಾಡಿ ಕೊಟ್ಟಿರುತ್ತೇನೆ ಮತ್ತು ಇನ್ನುಳಿದ ನನ್ನ ಹತ್ತಿರ ಹಣವನ್ನು ಸಹ ಕೊಟ್ಟಿದ್ದೇನೆ. ಆರೋಪಿಗೆ ರೂ.3,00,000/- ಹಣವನ್ನು ಸೇರಿಸಲು ನಾನು ಹಾವೇರಿಯ ಕೆ.ವಿ.ಜಿ ಬ್ಯಾಂಕನಲ್ಲಿ ಯಾವ ದಿನಾಂಕ ಮತ್ತು ವರ್ಷದಲ್ಲಿ ಸಾಲ ಪಡೆದಿದ್ದೆ ಎಂದು ನನಗೆ ಗೊತ್ತಿರುವದಿಲ್ಲ. ಆರೋಪಿಗೆ ರೂ.6,00,000/- ಹಣವನ್ನು ಸೇರಿಸಿಕೊಡುವಾಗ ನಾನು ರೂ.3,00,000/- ಹಣವನ್ನು ಕೆ.ವಿ.ಜಿ ಬ್ಯಾಂಕನಲ್ಲಿ ಸಾಲವಾಗಿ ಪಡೆದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಬಲ್ಲೆ ಮತ್ತು ನನ್ನ ಬಂಗಾರದ ಒತ್ತೆ ಇಟ್ಟು ಸಲುವಾಗಿಯ ದಾಖಲಾತಿಯನ್ನು ಹಾಜರುಪಡಿಸಬಲ್ಲೆ. ಈ ಪಿರ್ಯಾದಿಯಲ್ಲಿ ನಾನು ಆರೋಪಿಗೆ ಹಣವನ್ನು ಕೊಡಬೇಕಾದರೆ ನನ್ನ ಬಂಗಾರದ ಒಡವೆಗಳನ್ನು ಒತ್ತೆ ಇಟ್ಟು ರೂ.3,00,000/- ಹಣ ತೆಗೆದುಕೊಂಡಿದ್ದೇನೆ ಮತ್ತು ಹಾವೇರಿಯ ಕೆ.ವಿ.ಜಿ ಬ್ಯಾಂಕನಲ್ಲಿ ರೂ.3,00,000/- ಸಾಲ ಮಾಡಿಕೊಟ್ಟಿರುತ್ತೇನೆ ಎಂದು ನನ್ನ ಪಿರ್ಯಾದಿಯಲ್ಲಿ ಬರೆಯಿಸಿದ್ದೇನೆ. ನಾನು ಆರೋಪಿಗೆ ರೂ.6,00,000/- ಸಾಲ ಕೊಟ್ಟ ಬಗ್ಗೆ ಯಾವುದೇ ರೀತಿ ದಾಖಲಾತಿಗಳನ್ನು ಬರೆಯಿಸಿಕೊಂಡಿರುವದಿಲ್ಲ ಮತ್ತು ಅದೇ ರೀತಿ ಯಾವುದೇ ರೀತಿ ಒಪ್ಪಂದ ಸಹ ಆಗಿರುವದಿಲ್ಲ.

**22)** ಆರೋಪಿಗೆ ನಾನು ರೂ.6,00,000/- ಹಣವನ್ನು ನಾನು 6 ತಿಂಗಳು ಆದ ಬಳಿಕ ನನ್ನ ರೂ.6,00,000/- ಹಣವನ್ನು ಮರುಪಾವತಿ ಮಾಡಬೇಕು ಎಂದು ಕೇಳಿದಾಗ ಆರೋಪಿಯು ಸದರಿ ರೂ.6,000000/- ಗಳಿಗಾಗಿ ನನಗೆ ಚೆಕ್ಕನ್ನು ಕೊಟ್ಟಿರುತ್ತಾಳೆ. ಆರೋಪಿಗೆ ನಾನು ರೂ.6,00,000/- ಗಳನ್ನು 6 ತಿಂಗಳು ಆದ ಬಳಿಕ ಮರಳಿ ಕೇಳಲು ಹೋದಾಗ ಆರೋಪಿಯು ತನ್ನ ಸೈಟನ್ನು ಮಾರಾಟ ಮಾಡಿ ಅದರಲ್ಲಿ ನನ್ನ ರೂ.6,00,000/- ಗಳನ್ನು ಮರಳಿಕೊಡುತ್ತೇನೆ ಎಂದು ತಿಳಿಸಿದಳು. ಆರೋಪಿಯು ನನಗೆ ನಿ.ಪಿ-1 ಚೆಕ್ಕನ್ನು 2021 ನೇ ಇಸ್ವಿಯಲ್ಲಿ ಕೊಟ್ಟಿರುತ್ತಾಳೆ, ಆದರೆ

ಯಾವ ದಿನಾಂದಂದು ಕೊಟ್ಟಿರುತ್ತಾಳೆ ಎಂದು ನೆನಪಿರುವದಿಲ್ಲ. ಆರೋಪಿಯು ನಿ.ಪಿ-1 ಚೆಕ್ಕನ್ನು ಕೊಡುವಾಗ ಆಕೆ ಸಹಿ ಮಾತ್ರ ಮಾಡಿಕೊಟ್ಟಿರುತ್ತಾಳೆ, ಆದರೆ ಅದರಲ್ಲಿ ಬರೆದಿರುವ ವಿಷಯ ನನಗೆ ಗೊತಿತರುವದಿಲ್ಲ, ಏಕೆಂದರೆ ನನಗೆ ಇಂಗ್ಲೀಷ ಭಾಷೆ ಬರುವದಿಲ್ಲ. ನಿ.ಪಿ-1 ಚೆಕ್ಕಿನಲ್ಲಿ ಆರೋಪಿ ಸಹಿ ಮಾತ್ರ ಮಾಡಿರುತ್ತಾಳೆ, ಆದರೆ ಅದರಲ್ಲಿ ಯಾವುದೇ ರೀತಿ ಬರವಣಿಗೆ ಬರೆದಿರುವದಿಲ್ಲ. ಆರೋಪಿಯು ನನ್ನ ಸಮಕ್ಷಮ ನಿ.ಪಿ-1 ಖಾಲಿ ಚೆಕ್ಕಿಗೆ ಸಹಿ ಮಾಡಿ ಕೊಟ್ಟಿರುತ್ತಾಳೆ. ಆರೋಪಿಯು ನಿ.ಪಿ-1 ಚೆಕ್ಕಿಗೆ ಸಹಿ ಮಾಡಿರುವದನ್ನು ಆಕೆಯ ಸಹಿಯನ್ನು ನಾನು ನೋಡಿದರೆ ಗುರುತಿಸಬಲ್ಲೆ.

**23)** ನಿ.ಪಿ-1 ಚೆಕ್ಕಿನ ಮೇಲೆ ಇರುವ ಸಹಿ ಆರೋಪಿ ರೇಖಾ ಕೊಟಕ ಇವರ ಸಹಿ ಆಗಿರುತ್ತದೆ. ನಿ.ಪಿ-5 ಅಂಚೆ ಹಿಂಬರಹದಲ್ಲಿ ಮಾಡಿದ ಸಹಿ ಸಾಕ್ಷಿಗೆ ತೋರಿಸಲಾಗಿ ಆ ಸಹಿ ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನಗೆ ನಿ.ಪಿ-1 ಚೆಕ್ಕನ್ನು ಕೊಟ್ಟ ಬಳಿಕ ನಾನು ಯಾವ ದಿನಾಂಕದಂದು ಮತ್ತು ತಿಂಗಳಿನಂದು ಅದನ್ನು ಕೆ.ವಿ.ಜಿ ಬ್ಯಾಂಕ ಶಾಖೆ ಹಾವೇರಿಯಲ್ಲಿ ಇಲ್ಲಿ ನಗಧೀಕರಣಕ್ಕೆ ಹಾಕಿರುತ್ತೇನೆ ಎಂದು ಗೊತ್ತಿರುವದಿಲ್ಲ. ನಿ.ಪಿ-1 ಆರೋಪಿಯು ಕೊಟ್ಟಂತಹ ಚೆಕ್ಕು ಯಾವ ಬ್ಯಾಂಕಿನಲ್ಲಿ ಪಡೆದಂತಹ ಚೆಕ್ಕು ಆಗಿರುತ್ತದೆ ಎಂದು ಆ ಬ್ಯಾಂಕಿನ ಹೆಸರು ನನಗೆ ಗೊತ್ತಿರುವದಿಲ್ಲ. ನಾನು ನಿ.ಪಿ-1 ಚೆಕ್ಕನ್ನು ನಗಧೀಕರಣಕ್ಕೆ ಹಾಕಿದಾಗ ಸದರಿ ಬ್ಯಾಂಕಿನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಒಂದು ದಾಖಲಾತಿಯನ್ನು ಕೊಟ್ಟಿರುತ್ತಾರೆ.

**24)** ಆರೋಪಿಯು ಕೊಟ್ಟಂತಹ ಚೆಕ್ಕನ್ನು ನಾನು ನಗಧೀಕರಣಕ್ಕೆ ಹಾಕಿದಾಗ ಆರೋಪಿಯು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ಕು ಅಮಾನ್ಯಗೊಂಡು ನಾನು ಆರೋಪಿಗೆ ಪುನಃ ಬೇಟಿಯಾಗಿ ನೀನು ಕೊಟ್ಟಂತಹ ಚೆಕ್ಕು ನಗಧೀಕರಣ ಆಗಿರುವದಿಲ್ಲ ಮತ್ತು ಬ್ಯಾಂಕಿನವರು ಒಂದು ದಾಖಲಾತಿ ಕೊಟ್ಟಿರುತ್ತಾರೆ, ನೀನು ನನಗೆ ರೂ.6,00,000/- ಕೊಡು ಎಂದು ನಾನು ಮರಳಿ ಕೇಳಿದೆ. ನಾನು ಆರೋಪಿಗೆ ವಕೀಲರ ಮುಖಾಂತರ ಕಾನೂನಾತ್ಮಕ ನೋಟಿಸನ್ನು ಕೊಟ್ಟಿರುತೇನೆ. ಸದರಿ ನೋಟಿಸಿಗೆ ವಕೀಲರೇ

ಮಾಹಿತಿಯನ್ನು ಕೊಟ್ಟಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ರೇಖಾ ಕೋಟಕ್ ಮತ್ತು ನನಗೂ ಯಾವುದೇ ರೀತಿ ಪರಿಚಯ ಇರುವದಿಲ್ಲ ಮತ್ತು ಈ ಪ್ರಕರಣ ಹೇಳಿದಂತಹ ಹಣಕಾಸಿನ ವ್ಯವಹಾರ ನನ್ನ ಮತ್ತು ಆರೋಪಿ ನಡುವೆ ಯಾವತ್ತೂ ಕೂಡ ಆಗಿಲ್ಲ ಅಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ರೀತಿ ಹಣಕಾಸಿನ ವ್ಯವಹಾರ ಆಗದೇ ಇದ್ದರೂ ಸಹ ಆರೋಪಿಯು ನನ್ನ ಬಳಿ ಕೊಟ್ಟಂತಹ ಆರೋಪಿಗೆ ಸಂಬಂಧಿಸಿದಂತಹ ಖಾಲಿ ಚೆಕ್ಕನ್ನು ನಾನು ದುರುಪಯೋಗಪಡಿಸಿಕೊಂಡು ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

**25)** ಆರೋಪಿ ರೇಖಾ ಕೊಟಕ್ ಇವರ ಗಂಡ ಹಾವೇರಿಯಲ್ಲಿ ಸವಣೂರ ಖಾರ ಮತ್ತು ಪೇಡೆಯ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ನಡೆಯಿಸಿಕೊಂಡು ಬರುತ್ತಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿರುವದಿಲ್ಲ. ಅರೋಪಿಯ ಗಂಡ ಹಾವೇರಿಯ ಸವಣೂರ ಶಿವಲಾಲ ಖಾರ ಮತ್ತು ಸ್ವೀಟ್ಸ್ ಅಂಗಡಿಯನ್ನು ನಡೆಸಿಕೊಂಡು ಬರುತ್ತಿರುವ ವಿಚಾರ ಗೊತ್ತಿದ್ದರೂ ಸಹ ನನಗೆ ಯಾವುದೇ ವಿಷಯ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯ ಗಂಡನ ಅಂಗಡಿಯಲ್ಲಿ ಸಾಕಷ್ಟು ವ್ಯಾಪಾರ ಆಗುತ್ತಿದ್ದರೂ ಸಹ ಮತ್ತು ಆರೋಪಿಗೆ ಹಣಕಾಸಿನ ಯಾವುದೇ ರೀತಿ ಅಡಚಣೆ ಇಲ್ಲದೇ ಇದ್ದರೂ ಸಹ ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲುಪಡಿಸಿದ್ದೇನೆ ಅಂದರೆ ಸರಿಯಲ್ಲ.

**26)** ಆರೋಪಿಯ ಮನೆಯಲ್ಲಿ ಆಕೆಯ ಗಂಡನಿಗೆ ಸವಣೂರ ಶಿವಲಾಲ ಖಾರ ಮತ್ತು ಸ್ವೀಟ್ಸ್ ಅಂಗಡಿಯನ್ನು ನಡೆಸಿಕೊಂಡು ಹೋಗಲು ಸಾಮಗ್ರಿಗಳನ್ನು ಬಸವೇಶ್ವರ ನಗದರಲ್ಲಿರುವ ಮನೆಯಲ್ಲಿ ಇಟ್ಟುಕೊಂಡಿದ್ದರು ಅಂದರೆ ನನಗೆ ಗೊತ್ತಿರುವದಿಲ್ಲ. ಅದೇ ರೀತಿ ಆರೋಪಿಯ ಮನೆಯಲ್ಲಿ ಆಕೆಯ ಮನೆಯಲ್ಲಿ ಇಟ್ಟಿರುವಂತಹ ಖಾರ ಮತ್ತು ಸ್ವೀಟ್ಸ್‌ಗಳನ್ನು ಸರಿಯಾಗಿ ಹೊಂದಿಸಿಡಲು ಮತ್ತು ಸ್ವಚ್ಛ ಮಾಡಲು ಲೀಸಾ ನೆಲೇಡಿ ಕೆಲಸ ಮಾಡುತ್ತಿರುವ ವಿಷಯ ನನಗೆ ಗೊತ್ತಿರುವದಿಲ್ಲ. ಆರೋಪಿ ಮನೆಯಲ್ಲಿ ಲೀಸವಾ ನೆಲವಡಿ ಇವರು ತುಂಬಾ ವರ್ಷಗಳಿಂದ ಆರೋಪಿಯ ಮನೆಯಲ್ಲಿ ಕೆಲಸ

ಮಾಡುತ್ತಿದ್ದರಿಂದ ಆಕೆಯನ್ನು ವ್ಯವಹಾರಕ್ಕೆ ಸಂಬಂದಪಟ್ಟಂತೆ ಹಾವೇರಿಯ ಬ್ಯಾಂಕ ಆಪ ಬರೋಡಾ ಇಲ್ಲಿಗೆ ಕಳುಹಿಸುತ್ತಿದ್ದರು ಅಂದರೆ ಆ ವಿಷಯ ನನಗೆ ಗೊತಿತರುವದಿಲ್ಲ. ಆ ರೀತಿಯಾಗಿ ಆರೋಪಿಯು ಲೀಸಾ ನೆಲವಡಿಗೆ ಕೊಟ್ಟಂತಹ ಚೆಕ್ಕನ್ನು ದುರುಪಯೋಗ ಪಡಿಸಿಕೊಳ್ಳಲು ಸದರಿ ಚೆಕ್ಕನ್ನು ಲೀಸಾ ನೆಲವಡಿ ಬ್ಯಾಂಕ ಆಪ ಬರೋಡಾ ಇಲ್ಲಿಗೆ ಸಲ್ಲಿಸದೇ ನನ್ನ ಬಳಿ ಕೊಟ್ಟಿರುತ್ತಾಳೆ ಅಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ ಲೀಸಾ ನೆಲವಡಿ ಈಕೆ ಖಾರ ಮತ್ತು ಸ್ವೀಟ್ಸ ಸ್ವಚ್ಚವಾಗಿಡಲು ಮತ್ತು ಆಕೆ ಆರೋಪಿಯ ಮನೆಯಲ್ಲಿ ಕೆಲಸ ಮಾಡುತ್ತಿರುವ ವಿಷಯ ಮತ್ತು ಆರೋಪಿಯು ಲೀಸಾ ನೆಲವಡಿಯ ಮೇಲೆ ತುಂಬಾ ವಿಶ್ವಾಸವಿಟ್ಟು ಬ್ಯಾಂಕಿಗೆ ಚೆಕ್ಕನ್ನು ಕೊಡುವ ಕಿಷಯ ನನಗೆ ಗೊತ್ತಿದ್ದರೂ ಸಹ ಮತ್ತು ಲೀಸಾ ನೆಲವಡಿ ಆ ಚೆಕ್ಕನ್ನು ನನಗೆ ಕೊಟ್ಟಿರುವ ವಿಷಯ ಗೊತಿತದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾವೇರಿಯ ಬ್ಯೂಟಿ ಪಾರ್ಲರ ಕೆಲಸ ಮಾಡುತ್ತಿದ್ದು, ಆರೋಪಿಯು ಸೀರೆ ವ್ಯಾಪಾರ ಮಾಡುತ್ತಿರುವ ವಿಷಯ ಮತ್ತು ಆರೋಪಿಯು ಆಗಾಗ ನನ್ನ ಬ್ಯೂಟಿ ಪಾರ್ಲರಗೆ ಆಗಾಗ ಬರುವ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಬ್ಯೂಟಿ ಪಾರ್ಲರನಿಂದ ಮದುವೆ ಸಂದರ್ಬಚಿಗಳಲ್ಲಿ ತಿಂಗಳಿಗೆ ರೂ.1,00,000/- ಮತ್ತು ಬೇರೆ ದಿನಗಳಲ್ಲಿ ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿದ್ದೇನೆ ಎಂದು ಸುಳ್ಳ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**27)** ಅದೇ ರೀತಿ ಆಡೂರ ಗ್ರಾಮದಲ್ಲಿ ನನ್ನ ಗಂಡನ ಹೆಸರಿನಲ್ಲಿ ಮೂರು ಮನೆಗಳು ಇದ್ದು, ಅದರಲ್ಲಿ ಒಂದು ಮನೆಯನ್ನು ಲೀಸಗೆ ಹಾಕಿದ್ದರಿಂದ ಅದರಿಂದ ರೂ.2,00,000/- ಬಂದಿರುತ್ತದೆ ಮತ್ತು ಇನ್ನೊಂದು ಮನೆಯಲ್ಲಿ ನಾವು ಅಗರಬತ್ತಿ ವ್ಯಾಪಾರ ಮಾಡುತ್ತೇವೆ ಎನ್ನುವ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2021 ರಲ್ಲಿ ಆರೋಪಿ ರೇಖಾ ಕೊಟ್ಟಕ ನನ್ನ ಬಳಿ ಬಂದಿಲ್ಲ ಮತ್ತು ರೂ.6,00,000/- ಕೈಗಡ ಸಾಲ ತೆಗೆದುಕೊಂಡಿರುವದಿಲ್ಲ ಅಂದರೆ ಸರಿಯಲ್ಲ, ಸದರಿ

ಹಣಕಾಸಿನ ವ್ಯವಹಾರಕ್ಕೆ ಸಂಬಂದಪಟ್ಟಂತೆ ಆರೋಪಿಯು ಚೆಕ್ಕಿಗೆ ಸಹಿ ಮಾತ್ರ ಮಾಡಿಕೊಟ್ಟಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**28)** ಈ ಪ್ರಕರಣದವನ್ನು ದಾಖಲುಪಡಿಸಲು ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನಮ್ಮ ವಕೀಲರು ಮಾಹಿತಿ ಕೊಟ್ಟಿರುತ್ತಾರೆ. ಆರೋಪಿ ಮತ್ತು ನನ್ನ ನಡುವೆ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನ್ನ ಮತ್ತು ಆರೋಪಿಯ ಮದ್ಯ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಮತ್ತು ಆರೋಪಿಯು ನನಗೆ ರೂ.6,00,000/- ಹಣವನ್ನು ಮರಳಿಕೊಡುವ ಬ್ಯಾದ್ಯಸ್ಥಿಕೆ ಬರುವದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ,
ಹಾವೇರಿ.